**ವ್ಯತ್ಯಾಸವಿಲ್ಲದಂತಹ ಶೈಲಿಯೊಂದಿದೆ. ಇದರಿಂದ ನಿಮ್ಮ ಕಥೆಯ ಶಿಲ್ಪಕ್ಕೆ, ಆಕೃತಿಗೆ ಭಂಗ ಉಂಟಾದಂತೆ ಅನ್ನಿಸುವುದಿಲ್ಲವೆ?**

ಪ್ರಬಂಧಗಳ ಗುಣ ಅಲ್ಲಲ್ಲಿ ನನ್ನ ಕಥೆಗಳಲ್ಲಿ ಕಾಣುವುದು ದಿಟ. ಕಥೆಯ ಶಿಲ್ಪಕ್ಕೆ ನನ್ನನ್ನು ನಾನು ಕಟ್ಟಿ ಹಾಕಿಕೊಳ್ಳಲಾರೆ. ಉತ್ಕಟ ಭಾವನೆ ಬಂದಂತೆ ಬರೆಯುವುದು ನನ್ನ ಕ್ರಮ. ಎಷ್ಟೋ ಸಲ ಕಥೆಯ ಮೂಲ ದ್ರವ್ಯವೇ ಪ್ರಬಂಧ ಶೈಲಿಯಲ್ಲಿ ಆಲಾಪಿಸುತ್ತದೆ. ಗೊರೂರು ಅವರನ್ನು ಗಮನಿಸಿ. ಅವರ ಪ್ರಬಂಧಗಳೆಲ್ಲ ಅಪ್ಪಟ ಕಥೆಗಳೇ ಆಗಿವೆ. ಅವರು ಹರಟೆ, ರಗಳೆ, ವಿನೋದ ಪ್ರಸಂಗಗಳು ಎಂದು ಕರೆದುಕೊಂಡರು. ಮಾಸ್ತಿಯವರು ಕಥೆ ಹೇಳುತ್ತಾ ಪ್ರಬಂಧಗಳ ವರದಿಯ ರೀತಿಗೆ ಬಂದುಬಿಡುತ್ತಾರೆ. ನವೋದಯ ಕಾಲದ ಅನೇಕ ಪ್ರಬಂಧಕಾರರು ಚಂದದ ಸ್ವಲಹರಿಯಲ್ಲಿ ತುಂಬ ಪ್ರಬಂಧಗಳನ್ನು ಬರೆದರು. ಒಂದೇ ಬಗೆಯ ಜಾಡನ್ನು ತಪ್ಪಿಸಿಕೊಳ್ಳಲು ಕೆಲ ನಿಜ ಘಟನೆಗಳನ್ನು ಹೇಳಲು ಕೆಲವೊಮ್ಮೆ ಪ್ರಬಂಧದ ಹೆಸರಲ್ಲಿ ಕಥೆ ಬರೆದಿರುವೆ. ಕಥೆಯ ರೀತಿನೀತಿಗಳ ಅನುಸರಿಸಿ ನಾನು ಕಥೆ ಬರೆಯುವವನಲ್ಲ. ಮಳೆ ಬಂದು ಹೊಳೆ ಹರಿದಂತೆ ನನ್ನ ಕಥನ ಯಾನ ಸಾಗುತ್ತದೆ.



◆ **ಕಥೆ, ಕಾದಂಬರಿಗಳ ನಂತರ ನಿಮ್ಮ ಬಹುಪಾಲು ಬರಹ ಜಾನಪದ ಚಿಂತನೆ, ಸಂಸ್ಕೃತಿ ವಿಶ್ಲೇಷಣೆ ಮತ್ತು ದಲಿತ ಚಿಂತನೆಗಳತ್ತ ಹೊರಳಿತು. ವಿಮರ್ಶೆಯಲ್ಲಿ ಅನೇಕ ತಕರಾರುಗಳನ್ನು ಒಡ್ಡಿದಿರಿ. ಪುನರ್‌ವ್ಯಾಖ್ಯಾನಗಳಿಗೆ ತೊಡಗಿದಿರಿ. ಕೆಲವೊಮ್ಮೆ ಹಿರಿಕಿರಿಯರಿಗೆ ಆತಂಕವನ್ನೂ ಹುಟ್ಟಿಸಿದಿರಿ.**

ನಿಮ್ಮ ಮಾತು ನಿಜ. ಯಾವಾಗ ನಾನು ಲಂಕೇಶರ ಅಂಗಳಕ್ಕೆ ಹೋಗಿ ನಿಂತೆನೋ ಆಗಲೇ ನಾನೊಬ್ಬ ಗ್ಲಾಡಿಯೇಟರ್ ಆಗಿ ನಿರ್ದಯನಾಗಿಬಿಟ್ಟೆ. ನೂರಾರು ಪಿಂಜರಾಪೋಲು ವಿದೂಷಕ ಲೇಖಕರ ಜಾತ್ರೆಯ ಕಂಡು ವ್ಯಗ್ರನಾಗಿದ್ದೆ. ವಿಮರ್ಶೆಯ ಬಗ್ಗೆ ಖಂಡಿತಾ ಏನೇನೂ ಗೊತ್ತಿಲ್ಲದ ನನ್ನ ಕೈಗೆ ಲಂಕೇಶರು ಹತ್ತಾರು ಕೃತಿಗಳ ಕೊಟ್ಟು ಫೈರ್ ಮಾಡು ಎಂದಿದ್ದರು. ತಕ್ಷಣವೇ ಸಿಕ್ಕ ಸಿಕ್ಕ ಲೇಖಕರ ಪುಸ್ತಕಗಳನ್ನೆಲ್ಲ ಅವಲೋಕಿಸಿ ಈ ಕೃತಿಗಳು ಕೂಡ ಬೂಸಾ ಎಂದು ಗುಂಡು ಹೊಡೆದಂತೆ ಬರೆದೆ. ಸ್ವತಃ ಲಂಕೇಶರಿಗೆ ಭಯವಾಗಿತ್ತು. ಅವರು ತಮ್ಮ 'ಗುಣಮುಖ' ನಾಟಕಕ್ಕೆ ಮುನ್ನುಡಿ ಬರೆದುಕೊಡು ಎಂದರೆ; ಅದು ನಾಟಕವೇ ಅಲ್ಲ ಎಂದು ಮುಲಾಜಿಲ್ಲದೆ ಬರೆದಿದ್ದೆ. ಲಂಕೇಶರು ಬೇಸರ ಮಾಡಿಕೊಳ್ಳಲಿಲ್ಲ. ನಿನ್ನ ನಿಲುವು ಪ್ರಾಮಾಣಿಕ ಆಗಿದ್ದರೆ ಸರಿ. ನಿನಗೆ ಅನಿಸಿದ್ದನ್ನು ಬರಿ ಎಂದು ಬೆನ್ನು ತಟ್ಟಿದ್ದರು. ಅವತ್ತು ಮಾಡಿದ ಪುಸ್ತಕ ವಿಮರ್ಶೆಯ ಬರಹಗಳು ನನ್ನಲ್ಲಿವೆ. ಆಗಾಗ ಅವನ್ನು ನೋಡಿ ಥೇ ಎಂತಹ ತಪ್ಪು ಮಾಡಿಬಿಟ್ಟೆನಲ್ಲಾ ಎನಿಸುತ್ತದೆ.

ಅಷ್ಟೊತ್ತಿಗೆ ಅಂಬೇಡ್ಕರರ ದಟ್ಟ ಪ್ರಭಾವ ನನಗಾಗಿತ್ತು. ಸಾಮಾಜಿಕ ನ್ಯಾಯದ ಪರಿಭಾಷೆಗಳಿಂದ, ಸಮಾಜದ ನಿತ್ಯ ನರಕದ ಕಣ್ಣಿಂದ ವಿಮರ್ಶೆ ಬರೆಯುವುದನ್ನು ಕಲಿತಿದ್ದೆ. ದಲಿತ ಸಂಘರ್ಷ ಸಮಿತಿಯ ಹೋರಾಟಗಳಲ್ಲಿದ್ದ ನನಗೆ ವಿಮರ್ಶೆಯೂ ಒಂದು ಹೋರಾಟದ ಭಾಗವಾಗಿ ಕಂಡು ನಾನಿವತ್ತಿಗೂ ವಿಮರ್ಶೆಯನ್ನು ಚಳವಳಿ, ಪ್ರತಿರೋಧ, ಹೋರಾಟ, ಮುರಿದುಕಟ್ಟುವ ಕೆಲಸ ಎಂದೇ ನಂಬಿರುವೆ. ಇದರಿಂದ ನನಗೂ ತುಂಬಾ ತೊಂದರೆಗಳಾಗಿವೆ. ನನಗೆ ಅತಿ ಹೆಚ್ಚು ಲೇಖಕ ಶತ್ರುಗಳಿದ್ದಾರೆ. ಅಂತೆಯೇ ಮರೆಮರೆಯ ಓದುಗರೂ ಇದ್ದಾರೆ. ಒಟ್ಟಿನಲ್ಲಿ ಸಾಹಿತ್ಯ ಪರಂಪರೆಯಲ್ಲಿ ಭಗ್ನತೆ ಒಂದು ಅನಿವಾರ್ಯ ಪಲ್ಲಟ. ನಾನು ಅವತ್ತು ಹಾಗೆ ನಡೆದು, ಬರೆದು ಬಂದಿದ್ದರ ಬಗ್ಗೆ ಪಶ್ಚಾತ್ತಾಪವಿಲ್ಲ. ಹಾಗೆ ಆಗಬೇಕಿತ್ತು. ಆ ಸಂದರ್ಭಕ್ಕೆ ನಾನೇ ಬೇಕಾಗಿತ್ತು. ತಪ್ಪು ಮಾಡಿದೆ ಎಂದು ಕೊರಗುವುದಿಲ್ಲ. ತಪ್ಪು ಕೂಡ ಒಂದು ಪಾಠ,

**ಭಾರತೀಯ ಸಮಾಜದಲ್ಲಿ ಇಷ್ಟು ಹಿಂಸೆ ತುಂಬಿರುವುದು ಜಾತಿಗಳ ಶ್ರೇಣಿಗಳಿಂದಲೇ. ಜಾತಿ ಅಫೀಮಿನ ನಶೆ ಸದಾ ಜಾತಿಗಳ ನಡುವೆ ಎಚ್ಚರವಾಗಿರುತ್ತದೆ.**